ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಅವರು ದುರುಪಯೋಗವಾಗಿದೆ ಎಂಬ ಬಗ್ಗೆ ಕೇಳಲಿಲ್ಲ. ತಾವು ಕೇಳಿರತಕ್ಕ ಪ್ರಶ್ನೆ, ಎಷ್ಟು ಹಣ ಖರ್ಚಾಗಿದೆ, ಎಷ್ಟು ಫಲಾನುಭವಿಗಳು ಇದ್ದಾರೆ ಎಂದು ಕೇಳಿದ್ದೀರಿ. ಮಾನ್ಯ ಸದಸ್ಯರು ಬೇರೆ ವಿಚಾರಗಳನ್ನೂ ನಮ್ಮ ಗಮನಕ್ಕೆ ತಂದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನೂ ಮಾಡುತ್ತೇವೆ.

ಮಂಗಳೂರು ಸೌಂದರೀಕರಣ.

45 (223)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರಪಾಲಿಕೆಗೆ 66ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ನಗರ ಸೌಂದರೀಕರಣಕ್ಕಾಗಿ ಹಾಗೂ ಅಭಿವೃದ್ಧಿ ಚಟುವಟಿಕೆಗೆ 50 ಲಕ್ಷ ರೂಪಾಯಿಗಳ ಬಿಡುಗಡೆಯಾಗಿರುವುದು ನಿಜವೇ?

ಆ) ಹಾಗಿಲ್ಲದಿದ್ದರೆ ಎಷ್ಟು ಹಣ ಬಿಡುಗಡೆಯಾಗಿದೆ, ಬಾಕಿಯಿರುವ ಹಣವೆಷ್ಟು ಹಾಗೂ ಇದನ್ನು ಯಾವಾಗ ಬಿಡುಗಡೆ ಮಾಡಲಾಗುವುದು.

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ಸಚಿವರು):

ಅ) ಸದರಿ ಉದ್ದೇಶಕ್ಕಾಗಿ ರೂ.25-00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಆ) ಮೇಲಿನ ಉದ್ದೇಶಕ್ಕೆ ಹೆಚ್ಚಿನ ಹಣ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎನ್.ಯೋಗೀಶ್ ಭಟ್: ಮಂಗಳೂರಿನಲ್ಲಿ 66ನೇ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಅದರ ಪೂರ್ಣವಾದ ಜವಾಬ್ದಾರಿಯನ್ನು ಭರಿಸುವಂತೆ ನಾವು ಒಂದು ಬೇಡಿಕೆಯನ್ನು ಇಟ್ಟಿದ್ದೆವು. ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾಸನಕ್ಕೆ 75 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. 25 ಲಕ್ಷ ರೂಪಾಯಿಗಳನ್ನು ನಗರದ ಸೌಂದರೀಕರಣಕ್ಕಾಗಿ ಮಂಗಳೂರಿಗೆ ಕೊಟ್ಟಿದ್ದೀರಿ, ಮಂಗಳೂರಿಗೆ ಕನಿಷ್ಟ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಾನು ಮತ್ತು ಸನ್ಮಾನ್ಯ ಮೇಯರ್‌ರವರು ವಿನಂತಿ ಮಾಡಿಕೊಂಡಿದ್ದೆವು. ಆ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸಾರ್ವಜನಿಕವಾದ ಒಂದು ಆಶ್ವಾಸನೆಯನ್ನು ಕೊಟ್ಟರು, 50 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು, ಆದರೆ ಬಿಡುಗಡೆ ಮಾಡಿದ್ದು ಕೇವಲ 25 ಲಕ್ಷ ರೂಪಾಯಿಗಳು ಮಾತ್ರ. ಎಲ್ಲಾ ಲೆಕ್ಕವನ್ನು ಮಾಡಿ ಒಂದು ತಿಂಗಳಲ್ಲಿ ಲೆಕ್ಕವನ್ನು ಚುಕ್ತಾ ಮಾಡಿದ್ದೇವೆ. ನೀವು ಕೊಡುತ್ತೇವೆಂದು ಹೇಳಿರುವ ಹಣದಲ್ಲಿ ನಗರದ ಸೌಂದರೀಕರಣಕ್ಕಾಗಿ ಮತ್ತು

ಡಾಂಬರೀಕರಣಕ್ಕಾಗಿ ಕೊಟ್ಟಿರುವುದು 25 ಲಕ್ಷ ರೂಪಾಯಿಗಳು, ಬಾಕಿ ಇರುವಂಥ 25 ಲಕ್ಷ ರೂಪಾಯಿಗಳನ್ನು ಯಾವಾಗ ಬಿಡುಗಡೆ ಮಾಡುತ್ತೀರೆಂದು ತಾವು ದಯಯಿಟ್ಟು ತಿಳಿಸಬೇಕು.

ಶ್ರೀ ಮೀರಾಜುದ್ದೀನ್ ಎನ್.ಪಟೇಲ್: ಕನ್ನಡ ಸಾಹಿತ್ಯ ಸಮ್ಮೇಳನದ ಸಲುವಾಗಿ ಆ ಜಿಲ್ಲೆಯ ಉಸ್ತುವಾರಿ ಸಚಿವರು 50 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ನಮಗೆ ಪತ್ರವನ್ನು ಬರೆದಿದ್ದರು. ಆದರೆ ನಮ್ಮ ಇಲಾಖೆಯಿಂದ ನಾವು 20 ಲಕ್ಷ ರೂಪಾಯಿಗಳನ್ನು ಮಾಡಿದ್ದೇವೆ. ಹಿಂದೆ ನಾವು ನಮ್ಮಿಂದ ಹಾಸನಕ್ಕೆ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದವು. ಅವರು ಬೇರೆ ಬೇರೆ ಇಲಾಖೆಯಿಂದ 75 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಮಾಡಿದ್ದರು. ಅದನ್ನು ಬಿಟ್ಟು 10ನೇ ಹಣಕಾಸಿನ ಆದೇಶದಂತೆ 7 ಕೋಟಿ 63 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆವು. ಸರ್ಕಾರದ ಬೇರೆ ಗ್ರಾಂಟ್ಸ್ ಅದು ಆಕ್ಟ್ರಾಯ್ ಆಗಲಿ, ವಾಹನ ತೆರಿಗೆ ಮನರಂಜನಾ ತೆರಿಗೆ, ಇನ್ನು ಯಾವುದು ಬಾಕಿ ಇದೆ ಅದನ್ನು ನಾವು ಮಾರ್ಚ್‌ದೊಳಗೆ ಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಇದು ಬಹಳ ಆಶ್ಚರ್ಯ, ಇನ್ನು ಮುಂದೆ ನಾವು ಮುಖ್ಯಮಂತ್ರಿಗಳು ಕೊಡುವ ಯಾವ ಆಶ್ವಾಸನೆಯನ್ನು ನಾವು ನಂಬಬಾರದಾ? ಅವರೇ ಬಹಳ ಸ್ಪಷ್ಟವಾಗಿ ಈ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 50 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ 25 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದೇ ಕಾರ್ಯಕ್ರಮಕ್ಕೆ ಹಾಸನಕ್ಕೆ, ಯಾವುದೇ ಇಲಾಖೆ ಕೊಡಲಿ, 75 ಲಕ್ಷ ರೂಪಾಯಿಗಳನ್ನು ಸರ್ಕಾರದ ವತಿಯಿಂದ ಕೊಟ್ಟಿದ್ದೀರೋ ಇನ್ನು 25 ಲಕ್ಷ ರೂಪಾಯಿಗಳನ್ನು ಜಾಸ್ತಿ ಕೊಡಿ ನಮ್ಮ ಅಭ್ಯಂತರ ಏನೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಆಶ್ವಾಸನೆ ಕೊಟ್ಟಮೇಲೆ ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಜನ ಒಳ್ಳೆಯ ಕಾರ್ಯಕ್ರಮ ಆಗುವುದರ ಬಗ್ಗೆ ನೀವು ಮೀನಾಮೇಷ ಏಕೆ ಎಣಿಸುತ್ತೀರಿ? ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದು ನಿಜವಾಗಿದ್ದರೆ, ದಯಮಾಡಿ ಎಲ್ಲಿಂದ ತೆಗೆದುಕೊಂಡು ಬರುತ್ತೀರೋ ತಂದು, ಉಳಿದ 25 ಲಕ್ಷ ರೂಪಾಯಿಗಳನ್ನು ಭರ್ತಿ ಮಾಡಿ. ಮುಖ್ಯಮಂತ್ರಿಗಳ ಭರವಸೆಗಾದರೂ ಇನ್ನು ಮುಂದೆ ಬೆಲೆ ಇದೆ, ಗೌರವ ಇದೆ ಎಂಬುದು ಕನ್ನಡ ನಾಡಿನ ಜನರಿಗೆ ಗೊತ್ತಾಗಬೇಕು.

ಶ್ರೀ ಮೀರಾಜುದ್ದೀನ್ ಎನ್.ಪಟೇಲ್: ಅಧ್ಯಕ್ಷರೆ, ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಂತೆ ಅವರ ಕಡೆಯಿಂದ ನಮಗೆ ಏನೂ ಆದೇಶ ಬಂದಿಲ್ಲ, 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಹೇಳಿ. ತಾವು ಏನು ಹೇಳುತ್ತಿದ್ದೀರಿ ಅದರ ಬಗ್ಗೆ ನಾನು ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಘೋಷಣೆ ಮಾಡಿದ್ದಾರೆ, ಪ್ರೆಸ್‌ನಲ್ಲಿ ಬಂದಿದೆ, ಎಲ್ಲಾ

ಅಧಿಕಾರಿಗಳ ಸಮ್ಮುಖದಲ್ಲಿ ಮಾಡಿದ್ದುದು. ಅಷ್ಟೇ ಅಲ್ಲ, ಉಡುಪಿಗೆ ಪರ್ಯಾಯ ಮಹೋತ್ಸವಕ್ಕೆ 25 ಲಕ್ಷ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿ ಹೋದರು, ಆದರೆ ಒಂದು ರೂಪಾಯಿ ಕೂಡ ಕೊಡಲಿಲ್ಲ. ಮುಖ್ಯಮಂತ್ರಿಗಳು ಪಬ್ಲಿಕ್ ಮೀಟಿಂಗ್‌ದಲ್ಲಿ ಹೇಳಿದ್ದು, ಪ್ರೆಸ್‌ನಲ್ಲಿ ಹೇಳಿದ್ದು ಭರವಸೆಯನ್ನು ಅಧಿಕಾರಿಗಳು ನಿಮಗೆ ಹೇಳಲಿಲ್ಲವೆಂದರೆ, ಇದು ಎಂತಹ ಸರ್ಕಾರದ ವ್ಯವಸ್ಥೆ ಎಂದು ನಮಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು: ಮೀರಾಜುದ್ದೀನ್ ನೀವು ಸ್ವಲ್ಪ ದಯಮಾಡಿ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಸದಸ್ಯರು, ಈ ರೀತಿಯಾಗಿ ಕೇಳಿದರು, ನೀವು ಏನಾದರೂ ಹೇಳಿದ್ದೀರಾ ಎಂದು ಕೇಳಿ ಆಲೋಚನೆ ಮಾಡಿ, ಆ ಹಣ ಹೇಗಿದೆ ನೋಡಿ, ಸ್ವಲ್ಪ ವ್ಯವಸ್ಥೆ ಮಾಡಿ.

ಶ್ರೀ ಮಿರಾಜುದ್ದೀನ್ ಎನ್ ಪಟೇಲ್: ಆಯಿತು, ಮಾಡುತ್ತೇನೆ.

ಅಧ್ಯಕ್ಷರು: ಈಗ ಕೃಷ್ಣಪ್ಪನವರ ಪ್ರಶ್ನೆ, ಉಮೇಶ್ ಕತ್ತಿಯವರೇ, ಉತ್ತರವನ್ನು ಹೇಳುವ ಮೊದಲು ಕೇಳಿ, ನೀವು ಸಚಿವ ಸಂಪುಟದ ಸದಸ್ಯರು, ನಿಮ್ಮ ಪ್ರಶ್ನೋತ್ತರ ಇರುವ ದಿವಸ ನೀವು ಬಂದು ಕಾಯದೆ, ನಾವು ನಿಮಗೋಸ್ಕರ... ಸದಸ್ಯರಿಗಾದರೆ ಗೈರು ಹಾಜರಾದರೆ ಸೆಕೆಂಡ್ ರೌಂಡ್ ಕೊಡುತ್ತೇವೆ. ನಿಮ್ಮ ಆಪ್ತ ಕಾರ್ಯದರ್ಶಿಗಳಿಗೆ ಅಷ್ಟು ಗೊತ್ತಾಗುವುದಿಲ್ಲವೇ?

ಶ್ರೀ ಉಮೇಶ್ ವಿ.ಕತ್ತಿ: ದಯಮಾಡಿ ಕ್ಷಮಿಸಬೇಕು, ಮಾನ್ಯ ಸದಸ್ಯರು ಕಛೇರಿಗೆ ಬಂದು ಒಂದು ಪ್ರತಿಯನ್ನು ತೆಗೆದುಕೊಂಡು ಹೋಗಿದ್ದರು, ನಾನು ಅವರು ಬರುವುದಿಲ್ಲವೆಂದು ತಿಳಿದುಕೊಂಡಿದ್ದೆ, ಕ್ಷಮಿಸಿ.

ಟೀ-ನರಸೀಪುರ ತಾಲ್ಲೂಕಿನ ಬನ್ನೂರಿನಲ್ಲಿ ಸಕ್ಕರೆ ಕಾರ್ಖಾನೆ ಮಂಜೂರಾತಿ

32 (199)

ಶ್ರೀ ಆರ್.ಕೃಷ್ಣಪ್ಪ (ಬನ್ನೂರು): ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ನರಸೀಪುರ ತಾಲ್ಲೂಕಿನ ಬನ್ನೂರಿನಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಮಂಜೂರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ಕಾರ್ಖಾನೆಯ ಹೆಸರೇನು?

ಆ) ಸದರಿ ಕಾರ್ಖಾನೆಯ ಕಾಮಗಾರಿಯು ಯಾವ ಹಂತದಲ್ಲಿದೆ ಹಾಗೂ ಎಂದಿನಿಂದ ಪ್ರಾರಂಭಿಸಲಾಗುವುದು?